# ಆಲ್ಕೆಮಿ-ರಸವಿದ್ಯೆ (ಪರಿವರ್ತನೆ)

ವಾಸ್ತವವೆನ್ನುವುದು ವಿರುದ್ಧವಾದವುಗಳ ಮೂಲಕ ಸಜೀವವಾಗಿರುತ್ತದೆ. ಅಂದರೆ ಪಾಸಿಟಿವ್ ಮತ್ತು ನೆಗೆಟಿವ್ ಮೂಲಕ, ಸ್ತ್ರೀ ಮತ್ತು ಪುರುಷನ ಮೂಲಕ, ಸೂರ್ಯ ಮತ್ತು ಚಂದ್ರನ ಮೂಲಕ; ವಾಸ್ತವವೆನ್ನುವುದು ಎರಡು ವಿರುದ್ಧವಾದವುಗಳು ಒಂದೇ ಗುರಿಯ ಕಡೆಗೆ ಕಾರ್ಯ ನಿರ್ವಹಿಸುವುದರ ಮೂಲಕ ಏರ್ಪಡುತ್ತದೆ. ಅವು ವಿರುದ್ಧವಾದವುಗಳಂತೆ ಕಾಣಿಸಿದರೂ, ಅವು ಪರಸ್ಪರವಾಗಿ ಅನ್ಯೋನ್ಯತೆಯನ್ನು ಸೃಷ್ಟಿಸಿಕೊಳ್ಳುತ್ತವೆ. ಈ ಅನ್ಯೋನ್ಯತೆಯೇ ವಾಸ್ತವವಾಗಿ ತಯಾರಾಗುತ್ತದೆ.

ಸ್ತ್ರೀ ಪುರುಷರಿಬ್ಬರು ಪರಸ್ಪರ ಸೇರಿ ಕಾರ್ಯವನ್ನು ನಿರ್ವಹಿಸಿ, ಮಾನವತ್ವವೆನ್ನುವುದು ಏರ್ಪಡುವುದಕ್ಕಾಗಿ ಸಹಾಯ ಮಾಡುತ್ತವೆ. ಆ ಎರಡರ ನಡುವೆ ಏರ್ಪಡುವ ಅಂತರ್ ಉದ್ರೇಕತೆ, ಒತ್ತಡ, ಉತ್ಸಾಹದಿಂದಾಗಿಯೇ ಶಕ್ತಿಯೆನ್ನುವುದು ಸೃಷ್ಟಿಸಲ್ಪಡುತ್ತದೆ ಹಾಗೂ ಮತ್ತಷ್ಟು ಬೆಳವಣಿಗೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಇದು ಎಲ್ಲಾ ಆಯಾಮಗಳಲ್ಲೂ ಕಾರ್ಯನಿರ್ವಹಿಸುತ್ತದೆ ಅಣುಗಳ ಅಂತರ್ ನಿರ್ಮಾಣವನ್ನು ಗಮನಿಸಿದರೆ, ಅಲ್ಲಿಯೂ ಸಹ ವಿರುದ್ಧವಾದವುಗಳು ಕಾರ್ಯನಿರ್ವಹಿಸುವುದನ್ನು ನೀವು ಕಾಣಬಹುದು. ಎಲೆಕ್ಟ್ರಾನ್ ನೆಗೆಟಿವ್ ವಿದ್ಯುತ್ತಿನ ಜೊತೆ, ಪ್ರೋಟಾನ್ ಪಾಸಿಟಿವ್ ವಿದ್ಯುತ್ತಿನ ಜೊತೆ ಇರುತ್ತವೆ. ಹೀಗೆ ವಿರುದ್ಧವಾದವುಗಳು ಇರುವುದರಿಂದಲೇ ಪದಾರ್ಥವೆನ್ನುವುದು ಸೃಷ್ಟಿಸಲ್ಪಡುತ್ತದೆ. ಒಂದು ವೇಳೆ ಒಂದು ಪಾಸಿಟಿವ್ ವಿದ್ಯುತ್ ಮಾತ್ರ ಇದ್ದರೆ, ಈ ಪ್ರಪಂಚವೆನ್ನುವುದು ತಕ್ಷಣ ಕಣ್ಮರೆಯಾಗುತ್ತದೆ. ಹಾಗೆಯೇ ಕೇವಲ ನೆಗೆಟಿವ್ ವಿದ್ಯುತ್ ಒಂದೇ ಇದ್ದರೆ ಏನೂ ಉಳಿದಿರುವುದಿಲ್ಲ.

ಇದೇ ರೀತಿಯಾಗಿ ವ್ಯಕ್ತಿಯ ಅಂತರಂಗದಲ್ಲೂ ಸಹ ನಡೆಯುತ್ತದೆ. ಆರೋಗ್ಯ ಮತ್ತು ಅನಾರೋಗ್ಯ ಎನ್ನುವವು ಎರಡೂ ಸೇರಿ, ನೀವು ಆನಂದವಾಗಿ ಇರಬೇಕೆಂದು ಇಟ್ಟುಕೊಂಡ ಸಂಕಲ್ಪಕ್ಕೆ ಶ್ರಮಿಸುತ್ತವೆ. ನೀವು ದೈವದ ಹತ್ತಿರ ಸೇರಬೇಕೆಂದು ಸಂಕಲ್ಪಿಸಿದರೆ, ಅದಕ್ಕೆ ನಿಮ್ಮಲ್ಲಿರುವ ಒಳ್ಳೆಯ ಮತ್ತು ಕೆಟ್ಟವುಗಳು ಎರಡು ಒಟ್ಟಾಗಿ ಕೆಲಸ ಮಾಡಿ ನಿಮ್ಮ ಸಂಕಲ್ಪವು ನೆರವೇರಲು ಶ್ರಮಿಸುತ್ತವೆ. ಹೀಗೆ ವಿರುದ್ಧವಾದವುಗಳು ಜೊತೆಗೂಡಿ ಕೆಲಸ ಮಾಡುತ್ತಾ ನೀವು ಅಂದುಕೊಂಡ ಗುರಿಗೆ ನಿಮ್ಮನ್ನು ಸೇರಿಸುತ್ತವೆ.

ಹಾಗೆಯೇ ಅಂತರ್ ಸೂರ್ಯನೆನ್ನುವುದು ಅಂತರ್ ಪಾಸಿಟಿವ್ ಗೆ, ಪುರುಷ ತತ್ತ್ವಕ್ಕೆ ಚಿಹ್ನೆ. ಅಂತರ್ ಚಂದ್ರವೆನ್ನುವುದು ಅಂತರ್ ನೆಗೆಟಿವ್ ಗೆ, ಸ್ತ್ರೀ ತತ್ತ್ವಕ್ಕೆ ಚಿಹ್ನೆ. ಪಾಸಿಟಿವ್ ಎನ್ನುವುದು ಉಷ್ಣತೆಯಿಂದ ಕೂಡಿ, ಚಲಿಸುತ್ತಾ ಸಕ್ರಿಯವಾಗಿ ಇರುತ್ತದೆ. ನೆಗೆಟಿವ್ ಎನ್ನುವುದು ತಂಪಾಗಿ, ನಿಶ್ಯಬ್ದವಾಗಿ, ಚಲಿಸದೇ ಇರುತ್ತದೆ. ಆದುದರಿಂದ ವ್ಯಕ್ತಿಯನ್ನು ಒಂದಾಗಿ ನೋಡಬೇಡಿ ಯಾವುದೂ ಸಹ ಕೇವಲ ಒಂದಾಗಿ ಇರಲಾರದು. ಪ್ರತಿಯೊಂದು ಎರಡಾಗಿ ವಿಂಗಡಿಸಲ್ಪಟ್ಟು ಸಜೀವವಾಗಿ ಇರುತ್ತವೆ. ನಿಮ್ಮ ಶರೀರವು ಎರಡಾಗಿ ವಿಂಗಡಿಸಲ್ಪಟ್ಟಿದೆ, ಅದೇ ರೀತಿ ಮನಸ್ಸು ಸಹ.

ಪುರುಷ ತತ್ವವು ತೀವ್ರವಾಗಿ ವ್ಯಕ್ತೀಕರಿಸುವ ಮನಸ್ತತ್ವ ಹೊಂದಿ ಉಗ್ರವಾಗಿಯೂ, ವೇಗವಾಗಿಯೂ ಇರುತ್ತದೆ. ಸ್ತ್ರೀ ತತ್ವವು ಸ್ವೀಕರಿಸುವಂತಹ ಗುಣದಿಂದ ಶಾಂತವಾಗಿ ಇರುತ್ತದೆ. ಸೂರ್ಯನು ನಿಮ್ಮಲ್ಲಿ ಸಕ್ರಿಯವಾಗಿ ಇರುವ ಭಾಗ, ಚಂದ್ರನು ನಿಮ್ಮಲ್ಲಿ ನಿಷ್ಕ್ರಿಯವಾಗಿ ಇರುವ ಭಾಗ. ಈ ಎರಡು ಆಳವಾದ ಸಮತತ್ವವನ್ನು ತಲುಪಿದರೆ ನೀವು ಇದ್ದಕ್ಕಿದ್ದಂತೆ ಮುಕ್ತಿಯನ್ನು ಹೊಂದುತ್ತೀರಿ, ಏಕತ್ವಕ್ಕೆ ಸೇರುತ್ತೀರಿ. ಅಂದರೆ ಮೇಲ್ನೋಟಕ್ಕೆ ವಿಭಜನೆ, ಶತೃತ್ವ

ಎನ್ನುವುದು ಇರುತ್ತದೆಂದು, ಅವುಗಳ ಒಳಗೆ ಪ್ರಯಾಣಿಸಿದರೆ ಅವು ಪರಸ್ಪರ ಒಂದಕ್ಕೊಂದು ಸಹಕರಿಸಿಕೊಳ್ಳುತ್ತಾ ಮಿತ್ರರಾಗಿ ಇರುತ್ತವೆಂದು, ಮತ್ತಷ್ಟು ಆಳವಾಗಿ ಪ್ರಯಾಣಿಸಿದರೆ ಅವೆರಡೂ ಒಂದೇ ಶಕ್ತಿಯಿಂದ ಹುಟ್ಟುತ್ತಿವೆ ಎಂದು, ಇರುವುದು ಒಂದೇ ಎಂದು ತಿಳಿದುಕೊಳ್ಳುತ್ತೀರಿ.

ಜಾಗರೂಕತೆ ಎನ್ನುವುದು ಎರಡು ವಿಧವಾಗಿ ಕೆಲಸ ಮಾಡುತ್ತದೆ. ಅದು ಸೂರ್ಯನನ್ನು ಮತ್ತು ಚಂದ್ರನನ್ನು ಸೃಷ್ಟಿಸುತ್ತದೆ. ತಿರುಗುತ್ತಿರುವ ಚಕ್ರಕ್ಕೆ ಮಧ್ಯದ ಕೇಂದ್ರ ಭಾಗವು ತಿರುಗದೇ, ಚಲಿಸದೇ ಇರುವ ತಿರುಗಾಣಿ (Pivot) ಇರುತ್ತದೆ. ಚಲಿಸುತ್ತಿರುವುದರ ಮಧ್ಯದಲ್ಲಿ ಚಲಿಸದೇ ಇರುವುದು ತಪ್ಪದೇ ಇರುತ್ತದೆ, ಇಲ್ಲದಿದ್ದರೆ ಚಲಿಸುವುದೆನ್ನುವುದು ಸಾಧ್ಯವಾಗುವುದಿಲ್ಲ.

ನೀವು ಜಾಗರೂಕರಾಗಿ ತಯಾರಾದರೆ, ಅಂದರೆ ರಾಗ-ದ್ವೇಷಗಳಿಗೆ ಅತೀತದ ಸ್ಥಿತಿಗೆ ತಲುಪಿದರೆ ಅಂದರೆ ಸ್ವಚ್ಛವಾಗಿದ್ದರೆ, ತಾಪವೆನ್ನುವುದು ಪರಿಧಿಯ ಕಡೆಗೆ ಪಯಣಿಸುತ್ತದೆ. ನಿಮ್ಮ ಶರೀರದಲ್ಲಿರುವ ಪ್ರತಿ ಅಣುವು ಬೆಚ್ಚಗೆ ತಯಾರಾಗುತ್ತದೆ, ಏಕೆಂದರೆ ಜಾಗರೂಕತೆ ಎನ್ನುವುದು ಶಕ್ತಿಯು ತನ್ನಷ್ಟಕ್ಕೆ ತಾನಾಗಿ ಭೇದಿಸಿಕೊಂಡು ತೀವ್ರವಾಗಿ ಪ್ರವಹಿಸುವಂತೆ ಉತ್ತೇಜಿಸುತ್ತದೆ. ಅದೇ ರೀತಿ ಎರಡನೆಯ ವ್ಯತಿರಿಕ್ತ ಪರಿಣಾಮವೇನೆಂದರೆ ನಿಮ್ಮ ಉಪಸ್ಥಿತಿಯ ಮಧ್ಯದ ಕೇಂದ್ರದ ಭಾಗವು ತಂಪಾಗಿ ತಯಾರಾಗುತ್ತದೆ ಅಂದರೆ ಚಂದ್ರನು ಸಹ ಕೆಲಸ ಮಾಡುತ್ತಿದ್ದಾನೆಂದು ಗ್ರಹಿಸಿರಿ.

ಶಕ್ತಿಯು ಕೇಂದ್ರದಲ್ಲಿ ನಿಂತಿದ್ದು ಅದು ಹೆಚ್ಚಾದಾಗ ಮಾತ್ರ ತಡೆಯಲಾಗದೇ ಉಕ್ಕಿ ಹರಿದು, ತಾತ್ಕಾಲಿಕವಾಗಿ ಬಿಡುಗಡೆಗೊಂಡಾಗ, ಅದು ಅಗ್ನಿಯಂತೆ ತಯಾರಾಗುತ್ತದೆ. ಇದ್ದಕ್ಕಿದ್ದಂತೆ ಶಕ್ತಿಯೆನ್ನುವುದು ಶರೀರದ ಕಡೆಗೆ ಬಿಡುಗಡೆಯಾಗುತ್ತದೆ. ಇದು ಕೆಟ್ಟ ಪರಿಸ್ಥಿತಿ. ನೀವು ಶಕ್ತಿಯನ್ನು ಅಂತರಂಗದಲ್ಲಿ ಒಟ್ಟುಗೂಡಿಸುತ್ತಾ ಇರುತ್ತೀರಿ. ಆನಂತರ ಒಂದು ದಿನ ನಿಲ್ಲಿಸಿಕೊಳ್ಳಲಾಗದೇ ಉಕ್ಕಿ ಹರಿದಾಗ ನೀವು ಅದನ್ನು ತಳ್ಳಿಬಿಡುತ್ತೀರಿ. ಆಗ ಅದು ಯಾವುದಾದರೂ ಗುಣದ ಮೂಲಕ ಅಂದರೆ ಕಾಮ, ಕ್ರೋಧ, ಲೋಭ, ಮೋಹದ ಮೂಲಕ ಹೊರಗಡೆ ಬರುತ್ತದೆ. ಹೀಗೆ ಸಂಗ್ರಹಿಸುವುದು-ತಳ್ಳಿಬಿಡುವುದು ಮತ್ತೇ ಸಂಗ್ರಹಿಸುವುದು ಪುನಃ ತಳ್ಳಿಬಿಡುವುದು ಈ ಪುನರಾವರ್ತನೆಯ ವಿಷವಲಯದಲ್ಲಿ ನೀವು ಸಿಲುಕಿಕೊಂಡಿದ್ದೀರಿ. ಆದರೆ ಜಾಗರೂಕತೆಯಿಂದಾಗಿ ಈ ಪರಿಸ್ಥಿತಿಯಲ್ಲಿ ಬದಲಾವಣೆ ಸಂಭವಿಸುತ್ತದೆ. ಜಾಗರೂಕತೆಯಿಂದಾಗಿ ಅಂತರ್ ಕೇಂದ್ರವು ಶಕ್ತಿಯನ್ನು ಕೇವಲ ಹೆಚ್ಚಾದಾಗ ಮಾತ್ರ ಬಿಡುಗಡೆ ಮಾಡದೇ, ಪ್ರತಿ ಕ್ಷಣವೂ ಶರೀರದ ಎಲ್ಲಾ ಅಣುಗಳಿಗೆ ಕಳುಹಿಸುತ್ತಿರುತ್ತದೆ.

ನಿಮ್ಮಲ್ಲಿಯ ಸೂರ್ಯನು ಶಕ್ತಿಯ ಬಿಡುಗಡೆಯನ್ನು ಎರಡು ವಿಧವಾಗಿ ಮಾಡುತ್ತಾನೆ. ನೀವು ಜಾಗರೂಕತೆಯಿಂದ ಇರದಿದ್ದರೆ ಕಾಮ, ಕ್ರೋಧ, ಲೋಭ, ಮೋಹ, ರೋಗಗಳು ಮತ್ತು ಇತರ ಮಾರ್ಗಗಳ ಮೂಲಕ ಶಕ್ತಿಯನ್ನು ಬಿಡುಗಡೆ ಮಾಡುತ್ತಾನೆ. ಅಥವಾ ನೀವು ಜಾಗರೂಕತೆಯಿಂದ ಇದ್ದರೆ ಈ ಚೈತನ್ಯದ ಸ್ಥಿತಿಯ ಮೂಲಕ ಪ್ರಕಾಶವಾಗಿ ಪರಿವರ್ತನೆಗೊಂಡು, ಕಾಂತಿಯಂತೆ ಬಿಡುಗಡೆಯಾಗುತ್ತದೆ. ಆಗ ನೀವು ನಿರಂತರವಾಗಿ ಕಾಂತಿಯ ಪ್ರವಾಹದಿಂದ ತುಂಬಿಕೊಳ್ಳುತ್ತೀರಿ. ನಿಮ್ಮಲ್ಲಿಯ ಎಲ್ಲಾ ಕಣಗಳು, ಅಣುಗಳು ಅದರಲ್ಲಿ ಸ್ನಾನವನ್ನು ಮಾಡುತ್ತವೆ. ಇದು ಸಂಭವಿಸಿದಾಗ, ನಿಮ್ಮ ಅಂತರ್ ಕೇಂದ್ರವು ತಂಪಾಗಿ ಮತ್ತಷ್ಟು ತಂಪಾಗಿ ತಯಾರಾಗಲು ಪ್ರಾರಂಭಿಸುತ್ತದೆ. ಅದು ಕೊನೆಗೆ ಅತ್ಯಂತ ತಂಪಾದ ಪ್ರದೇಶವಾಗಿ ತಯಾರಾಗುತ್ತದೆ.

ನಿಮ್ಮ ಚೈತನ್ಯವು ಅಭಿವೃದ್ಧಿಗೊಳ್ಳುತ್ತಾ ವಿಸ್ತರಿಸಿದಾಗ, ನಿಮ್ಮಲ್ಲಿಯ ಅಗ್ನಿ ಎನ್ನುವುದು ಕಾಂತಿಯಾಗಿ ಪರಿವರ್ತನೆ ಹೊಂದುತ್ತದೆ. ನಿಮ್ಮ ಶರೀರವು ಜ್ಞಾನೋದಯವಾದಾಗ, ಶರೀರದಲ್ಲಿರುವ ಎಲ್ಲಾ ಅಣುಗಳು ಕಾಂತಿಯುತವಾದಾಗ, ಅವು ಎಚ್ಚೆತ್ತು ಪ್ರಜ್ಞೆಗೆ (Coscious) ಬಂದಾಗ, ಅಂತರ್ ಚಂದ್ರನು ಬೆಳೆಯುತ್ತಾನೆ. ಹೀಗೆ ಅಮಾವಾಸ್ಯೆಯ ಚಂದ್ರನು ಬೆಳೆದ ನಂತರ ನೀವು ನಿಮ್ಮ ಅಂತರ್ ಪ್ರಕೃತಿಯಲ್ಲಿ ಪೂರ್ಣ ಚಂದ್ರನ ಅನುಭೂತಿ ಹೊಂದುತ್ತೀರಿ. ಇಲ್ಲಿ ಪೂರ್ಣ ಚಂದ್ರನೆಂದರೆ ಸೂರ್ಯ ಮತ್ತು ಅಮಾವಾಸ್ಯೆ ಚಂದ್ರನಿಗೆ ಅತೀತವಾದದ್ದು ಎಂದು ಗ್ರಹಿಸಿರಿ.

ನಿಮ್ಮಲ್ಲಿಯ ಅಗ್ನಿ ಸಂಪೂರ್ಣವಾಗಿ ಕಾಂತಿಯಾಗಿ ಪರಿವರ್ತನೆ ಆದಾಗ, ತಾಪವೆನ್ನುವುದು ಇರುವುದಿಲ್ಲ. ಆದ್ದರಿಂದ ಪೂರ್ಣ ಚಂದ್ರನನ್ನು ಚಿಹ್ನೆಯಾಗಿ ಉಪಯೋಗಿಸಿಕೊಳ್ಳುತ್ತಿದ್ದೇವೆ. ಚಂದ್ರನಿಗೆ ಕಾಂತಿ ಇರುತ್ತದೆ ಆದರೆ ತಾಪ ಇರುವುದಿಲ್ಲ. ಆದುದರಿಂದ ಅದರ ಕಾಂತಿಯೆನ್ನುವುದು ತಂಪಾಗಿರುತ್ತದೆ. ಆದ್ದರಿಂದ ನೀವು ಅಂತರ್ ಪ್ರಯಾಣವನ್ನು ಪ್ರಾರಂಭಿಸಿದಾಗ ಮೊದಲ ಅನುಭವಗಳು ಬಂಡಾಯದ ಧೋರಣೆಯಿಂದ ರಜೋ-ತತ್ವದಿಂದ ಇರುತ್ತವೆ. ಆದರೂ ನೀವು ಅಂತರ್ ಪ್ರಯಾಣವನ್ನು ಮುಂದುವರೆಸಿದರೆ, ಅಗ್ನಿ ತತ್ವವು ಕರಗಿಹೋಗಿ ಕೊನೆಗೆ ಕೇವಲ ಕಾಂತಿಯಿಂದ ಪ್ರಕಾಶಿಸುವ ತಂಪಾದ ನಿಶ್ಯಬ್ದ ಚಂದ್ರನೇ ಉಳಿದುಕೊಳ್ಳುತ್ತಾನೆ. ಆಗಲೇ ನೀವು ದ್ವಂದ್ವಗಳ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಂತೆ ಆಗುತ್ತದೆ. ಚಂದ್ರನನ್ನು-ಸೂರ್ಯನನ್ನು, ಜನನವನ್ನು-ಮರಣವನ್ನು ತಿಳಿದುಕೊಳ್ಳುತ್ತೀರಿ. ಹೀಗೆ ಎರಡನ್ನು ಒಮ್ಮೆಗೇ ತಿಳಿದುಕೊಂಡರೆ, ನೀವು ಆ ಎರಡನ್ನೂ ಅತಿಕ್ರಮಿಸುತ್ತೀರಿ, ಎಂದರೆ ಆ ಎರಡನ್ನೂ ದಾಟಿ ಮುಂದೆ ಹೋಗುತ್ತೀರಿ.

ಆದುದರಿಂದ ಎಲ್ಲಾ ಸಮಸ್ಯೆಗಳಿಗೆ ಒಂದೇ ಪರಿಹಾರ, ಅಗ್ನಿಯನ್ನು ಕಾಂತಿಯನ್ನಾಗಿ ಪರಿವರ್ತನೆಗೊಳಿಸುವುದು. ಅಗ್ನಿಯನ್ನು ಅಗ್ನಿಯನ್ನಾಗಿ ಉಪಯೋಗಿಸಿಕೊಳ್ಳದೇ ಕಾಂತಿಯಂತೆ ಉಪಯೋಗಿಸಿಕೊಳ್ಳಿರಿ. ಅಂದರೆ ಅಗ್ನಿಯನ್ನು ಒಂದೇ ಕಡೆಗೆ ಪ್ರಸರಿಸಿದರೆ ಅದು ಅಗ್ನಿಯಾಗಿಯೇ ಇರುತ್ತದೆ, ಆದರೆ ಅದನ್ನು ಎಲ್ಲಾ ಕಡೆಗೆ ವಿಸ್ತರಿಸುವಂತೆ ಮಾಡಿದಾಗ ಅದು ಕಾಂತಿಯಾಗಿ ಬದಲಾಗುತ್ತದೆ. ಅಂದರೆ ಟಾರ್ಚ್ ಲೈಟ್ ನಂತೆ ಅಲ್ಲದೇ ಬಲ್ಬ್ ನಂತೆ ಅಗ್ನಿಯನ್ನು ಉಪಯೋಗಿಸಿಕೊಳ್ಳಬೇಕೆಂದು ಗ್ರಹಿಸಿರಿ. ಇಲ್ಲಿ ಕಾಂತಿಯು ಕತ್ತಲಿಗೆ ವಿರುದ್ಧವಾದುದು ಅಲ್ಲವೆಂದು, ಕತ್ತಲು-ಬೆಳಕುಗಳಿಗೆ ಅತೀತವಾಗಿ ಇರುವ ಸ್ವಚ್ಛವಾದ ಕಾಂತಿಯೆಂದು ಗ್ರಹಿಸಿರಿ.

ನಿಮಗೆ ಕೋಪ ಉಂಟಾದಾಗ, ಕಣ್ಣು ಮುಚ್ಚಿಕೊಂಡು ಕೋಪದ ಮೇಲೆ ಧ್ಯಾನವನ್ನು ಮಾಡಿರಿ. ಆಳವಾಗಿ ಅಗೆಯುತ್ತಾ ಕೋಪವು ಎಲ್ಲಿಂದ ಬರುತ್ತಿದೆಯೋ ಕಂಡುಕೊಳ್ಳಿರಿ. ನಾವು ಸಾಧಾರಣವಾಗಿ ವಿರುದ್ಧವಾಗಿ ಮಾಡುತ್ತೇವೆ, ನಮಗೆ ಕೋಪ ಬಂದಾಗ, ಅದಕ್ಕೆ ಬಾಹ್ಯ ಕಾರಣವನ್ನು, ಬಾಹ್ಯವಾಗಿ ಅದನ್ನು ಸೃಷ್ಟಿಸಿದವರ ಬಗ್ಗೆ ಆಲೋಚಿಸುತ್ತೇವೆ. ಆದರೆ ಈ ಕ್ಷಣದಿಂದ ಹೊರಗಡೆಯನ್ನು (ಬಾಹ್ಯವನ್ನು) ಬಿಟ್ಟು ಅಂತರಂಗದಲ್ಲಿಯ ಅದರ ಕೇಂದ್ರವನ್ನು ಕಂಡುಕೊಳ್ಳಿರಿ.

ನೀವು ಕೋಪದಲ್ಲಿ ಇದ್ದಾಗಲೇ ಕೇಂದ್ರದ ಕಡೆ ಪಯಣಿಸುವುದು ತುಂಬಾ ಸುಲಭವಾಗುತ್ತದೆ ಏಕೆಂದರೆ ಆಗ ನೀವು ಭಾವೋದ್ವೇಗದಿಂದ ಇರುತ್ತೀರಿಯಾದ್ದರಿಂದ. ಆ ಮನೋಭಾವದ ತಾಪವನ್ನು ಒಂದು ಮಾರ್ಗವಾಗಿ ಉಪಯೋಗಿಸಿಕೊಂಡು, ತುಂಬಾ ಸುಲಭವಾಗಿ ಅದರ ಮೂಲಕ ಅಂತರ್ ಕೇಂದ್ರದ ಕಡೆಗೆ ಪ್ರಯಾಣಿಸಬಲ್ಲಿರಿ.

ನೀವು ಪ್ರಯಾಣಿಸುತ್ತಿರುವಾಗ ಕೋಪದಲ್ಲಿ ಪಾಲ್ಗೊಳ್ಳಬೇಡಿ, ಏಕೆಂದರೆ ನೀವು ಪಾಲ್ಗೊಂಡರೆ ಅದು ಪರಿವರ್ತನೆ ಹೊಂದದೇ ಹೊರಗಡೆ ತಳ್ಳಿಹಾಕಲ್ಪಡುತ್ತದೆ. ಮತ್ತು ಅದನ್ನು ನಿಗ್ರಹಿಸಬೇಡಿ ಏಕೆಂದರೆ ನೀವು ನಿಗ್ರಹಿಸಿದರೆ ಉಕ್ಕಿ ಹರಿಯುತ್ತಿರುವ ಶಕ್ತಿಯು ಮೂಲ ಕೇಂದ್ರದ ಒಳಗೆ ಮರಳಿ ತಳ್ಳಿಹಾಕಲ್ಪಡುತ್ತದೆ. ಆದರೆ ಕೇಂದ್ರವು ಅದನ್ನು ಹೀರಿಕೊಳ್ಳಲಾರದು. ಅದನ್ನು ಕೇಂದ್ರವು ಪುನಃ ಮರಳಿ ಶರೀರದ ಕಡೆಗೆ ಮತ್ತಷ್ಟು ಬಲವಾಗಿ ತಳ್ಳಿಬಿಡುತ್ತದೆ. ಆದುದರಿಂದ ಪಾಲ್ಗೊಳ್ಳಬೇಡಿ ಹಾಗೂ ನಿಗ್ರಹಿಸಬೇಡಿ. ಕೇವಲ ಜಾಗರೂಕತೆಯಿಂದ ಇದ್ದು ಅಂತರಂಗದಲ್ಲಿರುವ ಕೇಂದ್ರದ ಕಡೆಗೆ ಪಯಣಿಸಿರಿ. "ಅಂತರ್ ಪ್ರಯಾಣ" ಟಾಪಿಕ್ ನಲ್ಲಿ ಹೇಳಿದ ಅಧಿಪತಿಗೆ ಮಾತ್ರ ಈ ಪ್ರಯಾಣ ಸಾಧ್ಯವಾಗುತ್ತದೆ.

ಕೇಂದ್ರವನ್ನು ತಲುಪಿದಂತೆ ನಿಮಗೆ ಹೇಗೆ ತಿಳಿಯುತ್ತದೆ? ನೀವು ಇಲ್ಲಿಯವರೆಗೆ ಬಾಹ್ಯ ದೃಷ್ಟಿಯಲ್ಲೇ ಇದ್ದು ಬಾಹ್ಯ ವಿಷಯಗಳನ್ನು ಹಿಡಿದುಕೊಂಡಿರುವುದರಿಂದ ಮನೋಭಾವ ಕೇಂದ್ರಕ್ಕೆ ಪಯಣಿಸಲಿಲ್ಲ. ಈಗ ಬಾಹ್ಯದ ಕಾರಣವನ್ನು ಬಿಡುಗಡೆಗೊಳಿಸಿ ನಿಮ್ಮ ದೃಷ್ಟಿಯನ್ನು ಬಾಹ್ಯಕ್ಕೆ ವಿರುದ್ಧ ದಿಕ್ಕಿನಲ್ಲಿರುವ ಅಂತರ್-ಕೇಂದ್ರದ ಕಡೆಗೆ ಸ್ಥಳಾಂತರಿಸಿ, ನೀವು ಆ ಕೇಂದ್ರದ ಕಡೆಗೆ ಪ್ರಯಾಣಿಸಿ, ಅದನ್ನು ತಲುಪಿರಿ. ಅಲ್ಲಿ ನೀವು ಮತ್ತು ಕೋಪ ಇಬ್ಬರು ಮಾತ್ರ ಉಳಿದಿರುತ್ತೀರಿ. ಕೋಪಕ್ಕೆ ಕಾರಣರಾದ ಬಾಹ್ಯ ವ್ಯಕ್ತಿ ಅಥವಾ ಬಾಹ್ಯ ವಿಷಯದ ಆಲೋಚನೆಗಳು ಎಳ್ಳಷ್ಟೂ ಇರುವುದಿಲ್ಲ. ಏಕೆಂದರೆ ಆ ಕೋಪಕ್ಕೆ ಕಾರಣ ನಿಮ್ಮಲ್ಲೇ ಇದೆ ಎಂದು ಗುರುತಿಸುತ್ತೀರಾದ್ದರಿಂದ. ಕೋಪದ ಕೇಂದ್ರವನ್ನು ಕಂಡುಕೊಂಡಿರುವಿರಿ ಆದ್ದರಿಂದ ಇನ್ನೂ ನೀವು ಅಂತರ್-ಪ್ರಯಾಣ ಮಾಡಬೇಕಾದ ಅವಶ್ಯಕತೆ ಇಲ್ಲವೆನ್ನುವ ವಿಷಯವನ್ನು ಗುರುತಿಟ್ಟುಕೊಳ್ಳಿ.

ನೀವು ರಾಗ-ದ್ವೇಷಗಳಿಗೆ ಅತೀತವಾಗಿ ಇದ್ದು, ಆ ಕೋಪದಲ್ಲಿ ಪ್ರವೇಶಿಸಿ ಅದರ ಮಧ್ಯದಲ್ಲಿರುವ ಕೇಂದ್ರದ ಹತ್ತಿರ ನಿಶ್ಯಬ್ದವಾಗಿ ಗಮನಿಸುತ್ತಾ ಚಲಿಸದೇ ಕುಳಿತುಕೊಳ್ಳಿರಿ. ಕೋಪವು ಮತ್ತು ನಿಶ್ಯಬ್ದವಾಗಿ ಗಮನಿಸುವುದೆನ್ನುವುದು ವಿರುದ್ಧವಾದವುಗಳಾದರೂ ಪ್ರಭಾವಶಾಲಿಯಾದವುಗಳು. ಯಾವಾಗ ನಿಶ್ಯಬ್ದದ ಗಮನಿಸುವಿಕೆ ಎನ್ನುವುದು ಕೋಪದಲ್ಲಿ ಪ್ರವೇಶಿಸುತ್ತದೋ ಆಗ ಅದು ಶಕ್ತಿಯನ್ನು ಪರಿವರ್ತಿಸುತ್ತದೆ. ಕೋಪದ ರಾಸಾಯನಿಕ ಮಿಶ್ರಣವು ಬದಲಾಗುತ್ತದೆ ಮತ್ತು ಅಗ್ನಿಯು ಕಾಂತಿಯಾಗಿ ತಯಾರಾಗುತ್ತದೆ. ಆಗ ಈ ಶಕ್ತಿಯು ಬಾಹ್ಯ ಕಾರಣದ ಕಡೆಗೆ ಚಲಿಸುವುದಿಲ್ಲ, ಹಾಗೆಯೇ ಕೇಂದ್ರದಲ್ಲಿಯೂ ಸಹ ನಿಗ್ರಹಿಸಲ್ಪಡುವುದಿಲ್ಲ. ಗಮನಿಸುವುದರ ಮೂಲಕ ಈ ಶಕ್ತಿಯು ವ್ಯಾಪಿಸುತ್ತದೆ. ಅದು ನಿಮ್ಮ ಶರೀರದ ಪರಿಧಿಯ ಕಡೆಗೆ ಕಾಂತಿಯಾಗಿ ಚಲಿಸುತ್ತದೆ. ವಿಸ್ತರಿಸಲ್ಪಟ್ಟಂತಾದರೆ ಅದು ಕಾಂತಿಯಾಗಿ ಚಲಿಸುತ್ತದೆ ಮತ್ತು ಆಗ ಆ ಕಾಂತಿಯೇ ಅಮೃತವಾಗಿ ತಯಾರಾಗುತ್ತದೆ.

ಇದನ್ನೇ ರಸವಿದ್ಯೆ ಶಾಸ್ತ್ರ ಅಥವಾ ರೂಪಾಂತರ ವಿದ್ಯೆ ಎನ್ನುತ್ತಾರೆ. ಹೀಗೆ ಅಂತರಂಗದಲ್ಲಿರುವ ಎಲ್ಲವನ್ನೂ ಸ್ವಚ್ಛವಾದ ಶಕ್ತಿಯನ್ನಾಗಿ, ಅಮೃತವನ್ನಾಗಿ ಪರಿವರ್ತನೆಗೊಳಿಸಿರಿ. ಹಾಗೆಯೇ ಈ ಅಮೃತದ ಮೂಲಕ ನೀವು ಅಮರರಾಗುತ್ತೀರಿ. ಏಕೆಂದರೆ ನೀವು ಜನನ-ಮರಣಗಳೆರಡನ್ನೂ ಅತಿಕ್ರಮಿಸುತ್ತೀರಾದ್ದರಿಂದ.

ಒಂದು ವೇಳೆ ನೀವು ಪರಿವರ್ತನೆಗೊಳಿಸುವುದರಲ್ಲಿ ವಿಫಲರಾದರೆ, ಆ ಸಮಸ್ಯೆಯನ್ನು ದೈವಕ್ಕೆ ಅರ್ಪಿಸಿ ನೀವೂ ಸಹ ದೈವದ ಹತ್ತಿರ ತಲುಪಿ ಹೇಗೆ ಪರಿವರ್ತಿಸಬೇಕೆನ್ನುವುದನ್ನು ಕಲಿತುಕೊಳ್ಳಿರಿ. ದೈವದ ಹತ್ತಿರ ಹೇಗೆ ತಲುಪಬೇಕೆನ್ನುವುದನ್ನು ತಿಳಿದುಕೊಳ್ಳಲು "ಕರಗಿಹೋಗಿ", "ಅಂತರ್ ಪ್ರಯಾಣ", "ಸಮರ್ಪಣೆ" ಎನ್ನುವ ಟಾಪಿಕ್ ಗಳನ್ನು ಓದಿರಿ.

## ಅನುಭವ

ನನಗೆ ಒಮ್ಮೆ ನಾಭಿಯಿಂದ ತಾಪವು ಮೇಲೇರಿ ಬಂದು ಇಡೀ ಶರೀರದಲ್ಲೆಲ್ಲಾ ಪ್ರವಹಿಸಿತು. ಆನಂತರ ಭ್ರೂಮಧ್ಯದಲ್ಲಿ ಚಕ್ರದಂತೆ ತಿರುಗುತ್ತಾ ಅದರ ಮೂಲಕವೂ ಸಹ ತಾಪವು ಶರೀರವೆಲ್ಲಾ ವ್ಯಾಪಿಸಿಕೊಂಡಿತು. ಸ್ವಲ್ಪ ಸಮಯ, "ಅಮ್ಮಾ" ಎಂದು ಅಳುತ್ತಾ ಆ ತಾಪವನ್ನು, ಆ ದುಃಖವನ್ನು ಸಹಿಸಿದೆ. ಮತ್ತೇ ಸ್ವಲ್ಪ ಸಮಯ ಅದರಿಂದ ಹೊರಬಂದು ಗಮನಿಸುವುದು, ನಂತರ ಅದರೊಳಗೆ ಪ್ರವೇಶಿಸಿ ಆಲ್ಕೆಮಿ ಮಾಡಿದೆನು. ಇನ್ನು ತಾಪವನ್ನು ಸಹಿಸಲಾರೆನೆಂದು ಅನ್ನಿಸಿತು. ಆನಂತರ ಭ್ರೂಮಧ್ಯದಿಂದ ತಂಪು ಇಡೀ ಶರೀರದಲ್ಲಿ ಪ್ರವಹಿಸಲು ಪ್ರಾರಂಭವಾಯಿತು. ಈ ತಂಪು ಸಹ ನನಗೆ ತೊಂದರೆಯಂತೆಯೇ ಅನ್ನಿಸಿತು. ಹೀಗೆ 4 ದಿನಗಳು ತಾಪವನ್ನು, 3 ದಿನಗಳು ತಂಪನ್ನು ಅನುಭವಿಸಿದೆನು. ಹೀಗೆ 7 ದಿನಗಳು ನಡೆದ ನಂತರ ಶರೀರದಲ್ಲಿ ತಾಜಾತನವನ್ನು ಅನುಭೂತಿ ಹೊಂದಿದೆನು.

ಈ ಏಳು ದಿನಗಳು ಬಾಯಿಯಲ್ಲಿ ಒಸಡುಗಳೆಲ್ಲಾ ಉಬ್ಬಿ ಕೀವು ಕಾಣಿಸಿಕೊಂಡಿತು. ಅಲ್ಲಿಂದ ಕೀವು ಮತ್ತು ರಕ್ತ ಸೋರಲು ಪ್ರಾರಂಭವಾಯಿತು. ಆ ಕೀವು ರಕ್ತವನ್ನು ನುಂಗಿಬಿಡುತ್ತಿದ್ದೆ. ಹೀಗೆ ಏಳು ದಿನಗಳು ನನ್ನ ಆಹಾರವು ಕೀವು ಮತ್ತು ರಕ್ತವೇ. ನುಂಗಬೇಡವೆಂದು ಕೆಲವರು ನನಗೆ ಸಲಹೆಯನ್ನು ನೀಡಿದರು. ಆಗ ನಾನು ಹೇಳಿದೆ, "ನನ್ನಿಂದ ಹುಟ್ಟಿದ್ದು ನನಗೇನೂ ಮಾಡುವುದಿಲ್ಲ, ಒಂದು ವೇಳೆ ಗಂಟಲಲ್ಲಿ ಹುಣ್ಣಾದರೆ ಆಗ ಅವು ತಪ್ಪದೇ ಒಳಗೆ ಹೋಗುತ್ತವಲ್ಲ, ಆದ್ದರಿಂದ ನುಂಗುತ್ತಿದ್ದೇನೆ" ಎಂದು ಹೇಳಿದೆ. ಈ ಏಳು ದಿನಗಳು ನಾನು ಊಟವನ್ನು ಸಹ ಮಾಡಲಿಲ್ಲ, ಕೇವಲ ನೀರನ್ನು ಕುಡಿದೆನು ಅಷ್ಟೇ. ಹೀಗೆ ನಡೆದ ನಂತರ ನನ್ನ ಹಲ್ಲುಗಳು ಬಿಳಿಯಾದವು. ಆನಂತರ ಎಲ್ಲವನ್ನೂ ಮಾಮೂಲಾಗಿ ತಿನ್ನಲು ಪ್ರಾರಂಭಿಸಿದೆನು.

ಸಾಹಸವನ್ನು ಮಾಡಿದರೆ ನೋಡಿ ಎಂಥಹ ಅದ್ಭುತವು ಸಂಭವಿಸಿತೆಂದು. ಐದು ಕೆ.ಜಿ ವರೆಗೂ ಭಾರ ಕಡಿಮೆಯಾದೆನು, ಹಲ್ಲುಗಳ ಕ್ಲೀನಿಂಗ್ ನಡೆಯಿತು. ನನ್ನ ಸ್ನೇಹಿತನಿಗೆ ಇದೇ ರೀತಿ ಸಂಭವಿಸಿದರೆ ವೈದ್ಯರು ಅವನ ಎರಡು ಹಲ್ಲುಗಳನ್ನು ಕಿತ್ತುಹಾಕಿದರು, 30 ಸಾವಿರ ರೂಪಾಯಿಯವರೆಗೆ ಖರ್ಚು ಸಹ ಆಯಿತು ಮತ್ತು ತುಂಬಾ ತರಹದ ಆಹಾರ ಪದಾರ್ಥಗಳಿಗೂ ದೂರವಾದನು.

ಅದೇ ರೀತಿ ಇಂಥಹ ಸಾಹಸಗಳನ್ನು ತುಂಬಾ ಜನರು ಮಾಡುತ್ತಿದ್ದಾರೆ. ಮನೆಯಲ್ಲೇ ಮಕ್ಕಳನ್ನು ಪ್ರಸವಿಸುತ್ತಿದ್ದಾರೆ. ಯಾರ ಸಹಾಯವೂ ಇಲ್ಲದೇ ಅತ್ಯಂತ ಕಡಿಮೆ ನೋವುಗಳಿಂದ ಮನೆಯಲ್ಲೇ ಹೆರಿಗೆಯನ್ನು ಮಾಡಿಕೊಳ್ಳುತ್ತಿದ್ದಾರೆ. ನೀರಿನ ಟಬ್ ನಲ್ಲಿ, ಕಮೋಡ್ ನಲ್ಲಿ, ನಿಂತೇ..... ಹೀಗೆ ಅನೇಕ ರೀತಿಯಲ್ಲಿ ಮಕ್ಕಳನ್ನು ಪ್ರಸವಿಸುತ್ತಿದ್ದಾರೆ. ಇವುಗಳನ್ನು ನೀವು ಯೂಟ್ಯೂಬ್ ನಲ್ಲಿ ನೋಡಬಹುದು. Unassisted home delivery ಎಂದು ಸರ್ಚ್ ಟೈಪ್ ಮಾಡಿ ನೋಡಿರಿ.

ನಾನು ಅನೇಕ ಪುಸ್ತಕಗಳನ್ನು ಓದಿ, ಆಚರಣೆಯನ್ನು ಮಾಡಿ, ಅದ್ಭುತಗಳನ್ನು ಸಾಧಿಸಿದ ನಂತರವೇ ನಿಮಗೆ ನಾನು ನನ್ನ ಅನುಭವ ಜ್ಞಾನವನ್ನು ನೀಡುತ್ತಿದ್ದೇನೆ. ನಾನು ಹೇಳಿದ್ದನ್ನು ಸುಮ್ಮನೇ ನಂಬದೇ, ಸಾಧನೆಯನ್ನು ಮಾಡಿ ನೀವು ಸಹ ಅನುಭವದ ಮೂಲಕ ತಿಳಿದುಕೊಳ್ಳಿರಿ. ಪ್ರಯತ್ನ, ಮತ್ತು ಪರಿಶ್ರಮದಿಂದ ಧೈರ್ಯ ಮಾಡಿದರೆ ಏನಾದರೂ ಸಾಧ್ಯವೇ, ಯಾವ ಸಮಸ್ಯೆ ಆದರೂ ನಿಮ್ಮಷ್ಟಕ್ಕೆ ನೀವೇ ಪರಿಹರಿಸಿಕೊಳ್ಳುತ್ತೀರಿ, ಸ್ವಲ್ಪ ಸ್ವಲ್ಪವಾಗಿ

ನೋವನ್ನು ಸಹಿಸಿಕೊಳ್ಳಲು ಸಿದ್ಧರಾಗಿ, ನಿಮ್ಮಷ್ಟಕ್ಕೆ ನೀವೇ ಅವುಗಳನ್ನು ಕಡಿಮೆ ಮಾಡಿಕೊಂಡು, ನಿಮ್ಮ ಬಗ್ಗೆ ನೀವು ವಿಶ್ವಾಸವನ್ನು ಹೆಚ್ಚಿಸಿಕೊಂಡು, ಜೀವನವನ್ನು ಆನಂದದಿಂದ ಕಳೆಯಬೇಕೆಂದು ಸಲಹೆಯನ್ನು ನೀಡುತ್ತಿದ್ದೇನೆ.

** ಇದನ್ನು ತೆಲುಗು ಭಾಷೆಯಿಂದ ಅನುವಾದಿಸಲ್ಪಟ್ಟಿದೆ. ತೆಲುಗು ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. **http://darmam.com/downloads/telugutopics/24.parivarthnam.pdf**

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ಕನ್ನಡದಲ್ಲಿ ಕೇಳಬೇಕೆಂದು (To Listen) ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಕೇಳಬಹುದು (Listen) **https://www.youtube.com/playlist?list=PL7sfndcUtXfluvXK-CsihXrxGyyljh8n6**

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ತೆಲುಗು, ಇಂಗ್ಲೀಷ್, ಕನ್ನಡ, ಹಿಂದಿ ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/library.html

**ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ. **http://darmam.com/important-topics.html**

**ಕಾಣಿಕೆಗಳು-Donations**

ಈ ನ್ಯೂ ಎನರ್ಜಿ ಕಾನ್ಸೆಪ್ಟ್ ನ್ನು ಆಚರಿಸಿ ಲಾಭ ಪಡೆದವರು ಅಥವಾ ಮತ್ತಾರಾದರೂ ಕಾಣಿಕೆಗಳನ್ನು ನೀಡಬಯಸುವವರು ಈ ಕೆಳಗೆ ತಿಳಿಸಿರುವ ಬ್ಯಾಂಕ್ ಖಾತೆಗೆ ಹಣವನ್ನು ಪಾವತಿಸಬಹುದು. ನಿಮ್ಮ ಸಹಾಯದಿಂದ ನ್ಯೂ ಎನರ್ಜಿ ಜ್ಞಾನವನ್ನು ಅತ್ಯಧಿಕ ಜನರಿಗೆ ತಲುಪಿಸಲು ನಮಗೆ ಪ್ರೋತ್ಸಾಹವನ್ನುಂಟು ಮಾಡುತ್ತದೆ. A/C DETAILS: P.SREEDHAR, STATE BANK OF INDIA, HANUMAKONDA BRANCH, IFSC CODE: SBIN0003422 A/C No: 30603897922. MOBILE No: 9390151912 - THIS NUMBER ALSO HAS GooglePay AND PhonePe.